ನಡುವೆಯೇ ಬದುಕು ಹೊಡಮರಳಿ, ನಮಗೆ ಅರಿವಿಲ್ಲದಂತೆಯೇ ಕಂತೆ ಒಗೆಯುವ ಹಂತಕ್ಕೆ ತಂದು ಎಸೆಯುತ್ತದೆಯೇನೊ ನಮ್ಮನ್ನು. ಬೆಕ್ಕಸಬೆರಗಾಗಿ ನಿಂತಿದ್ದೇನೆ ಪ್ರಕೃತಿಯ ಈ ಸೋಜಿಗಕ್ಕೆ! ಆದಾಯ ತೆರಿಗೆ ಇಲಾಖೆ ನೀಡುವ PAN (ಪರ್ಮನೆಂಟ್ ಅಕೌಂಟ್ ನಂಬರು), ಅಂಚೆ ಇಲಾಖೆ ನೀಡುವ PIN(ಪೋಸ್ಟಲ್ ಇಂಡೆಕ್ಸ್ ನಂಬರ್), ಅಂತೆಯೇ ಅಂತರರಾಷ್ಟ್ರೀಯ ಮಟ್ಟದ ಸಂಘಟನೆಯೊಂದಿದೆ PEN – ಪೋಯೆಟ್ಸ್, ಎಸ್ಸೇಯಿಸ್ಟ್, ನಾವೆಲಿಸ್ಟ್ ಎಂದು. ಪೆನ್ನು ಎಂದರೆ ಸುಮ್ಮನೆ ಏನು? ನಾಗರಿಕ ಜಗತ್ತಿನಲ್ಲಿ ಅದು ಎಲ್ಲ ಕಾಲಕ್ಕೂ ಕಾಡುವ ಗನ್ನು.

ಒಂದು ಕಾಲದಲ್ಲಿ ಪ್ರತಿಷ್ಠಿತ ಮಂತ್ರಿ ಮಹೋದಯರು ಪೆನ್ನು ಇಡುವುದಕ್ಕಾಗಿಯೇ ತಮ್ಮ ಜುಬ್ಬಾದ ಎದೆಯ ಭಾಗದಲ್ಲಿ ಬತ್ತಳಿಕೆಯಂತಹ ಜೇಬು ಇಡಿಸುತ್ತಿದ್ದರು. ನನ್ನ ಕಥೆ ಕೇಳಿರಿ. ಮನೆಯೊಳಗಿದ್ದರೂ ಪೆನ್ನೊಂದು ನನ್ನ ಕೈಗೆಟುಕುವಂತಿರಬೇಕು. ಹೊರಗೆ ನಡೆದರೂ ಹೃದಯಕ್ಕೆ ತಾಗಿದಂತೆ ಅದು ನನ್ನ ಎದೆ ಜೇಬಿನಲ್ಲಿ ಭದ್ರವಾಗಿ ಅಡಗಿ ಕೂತಿರಬೇಕು. ಕಟ್ಟಿಕೊಂಡ ಹೆಂಡತಿಯನ್ನು ಬೇಕಾದರೂ ತೊರೆದು ಜೀವಿಸಿಯೇನು. ಆದರೆ, ಪೆನ್ನು ಇಲ್ಲದೆ ಅರೆಗಳಿಗೆ ಇರಲಾರೆನು. ಇವನಾವನೋ ಪೆನ್ನಿನ ಹುಚ್ಚನೆಂದು ಲೋಕ ಜರಿದರೂ ಪರವಾಯಿಲ್ಲ. ನೇಗಿಲು ಹಿಡಿದವನಿಗಿಂತ ಪೆನ್ನು ಹಿಡಿದವನೇ ಸುಖಿ. ಹಾಗೆಯೆ ಪೆನ್ನು ಹಿಡಿದವ ಹೆಚ್ಚು ಅಪಾಯಕಾರಿ ಕೂಡ. ಇದಕ್ಕೆ ವಿಶ್ವದ ಚರಿತ್ರೆಯೇ ಸಾಕ್ಷಿ!

* * *

'ಪೆನ್ನು ಪೆನ್ನೆಂದೇತಕ್ಕೆ ಸಾಯುವಿರಿ ಮೂರೂ ಹೊತ್ತು?'-ಎನ್ನುವುದು ನನ್ನ ಮಡದಿಯ ಅನುದಿನದ ಆಕ್ಷೇಪ. ನಾನಾದರು ಏನು ಮಾಡಲಿ? ಈಗಿನ ಮೊಬೈಲು ಹುಚ್ಚರಂತೆ ನಾನೂ ಅಪ್‌ಡೇಟ್ ಆಗಲಿಲ್ಲವಲ್ಲ. ತೊಟ್ಟ ಬಟ್ಟೆಗಳನ್ನು ವಾಶಿಂಗ್ ಮೆಶೀನಿಗೆ ಹಾಕಲು ಗುಡ್ಡೆ ಹಾಕುತ್ತಿದ್ದಂತೆ ಧಾವಿಸಿ ಓಡಿ ಹೋಗಿ ನನ್ನ ಪೆನ್ನು ಹುಡುಕುತ್ತೇನೆ. ಹಿಂದೊಮ್ಮೆ ಮರೆತು ನನ್ನ ಪ್ಲಾಸ್ಟಿಕ್ ಪೆನ್ನು ಬಟ್ಟೆಯೊಟ್ಟಿಗೆ ತಲೆ ಮರೆಸಿಕೊಂಡು ಹೋಗಿ ಪುಡಿಪುಡಿಯಾಗಿ ತೊಳೆದ ಬಟ್ಟೆಗಳೆಲ್ಲ ಇಂಕುಮಯವಾಗಿದ್ದ ಹಳೆಯ ಘಟನೆಯ ನೆನಪಿನಿಂದಾಗಿ!

ನಾವು ಅದೇ ಆಗ ಅಕ್ಷರ ಬೆಳಕಿಗೆ ಕಣ್ಣು ಬಿಟ್ಟವರಾಗಿ, ಮಣ್ಣಿನ ಪಾಟಿ ಸೀಸದ ಕಡ್ಡಿಯಿಂದ ನಂತರ ಗೆರೆಯಿರುವ ನೋಟ್‌ಬುಕ್ಕಿಗೆ ಬಡತಿ ಹೊಂದಿದಾಗ ಪೆನ್ನಿನ ಹಪಾಹಪಿ ಶುರುವಾದದ್ದು. ಆಗಿನ್ನೂ ಕಿರಾಣಿ ಅಂಗಡಿಗಳಲ್ಲಿ ಕೂತು ಜಮಾ-ಖರ್ಚು ಬರೆಯುವವರ, ತಹಶೀಲದಾರ-ಶಿರಸ್ತೇದಾರರ ಕಚೇರಿಯ ಆವರಣದಲ್ಲಿ ಮರದ ನೆರಳಿಗೆ ಹಾಸಿರುತ್ತಿದ್ದ ಜಮಖಾನೆಯ ಮೇಲೆ ಟ್ರಂಕು ಇಟ್ಟುಕೊಂಡು ಕೂತು ಆಸ್ತಿಯ ನೋಂದಣಿ-ವರ್ಗಾವಣೆಗಾಗಿ ಬರುವವರಿಗಾಗಿ ಕಾದಿರುತ್ತಿದ್ದ ಸ್ಟ್ಯಾಂಪು ವೆಂಡರುಗಳ ಮುಂದೆ, ಹಾಗೆಯೇ ಅಂಚೆ ಕಚೇರಿಯ ಮುಂದೆ ಠಳಾಯಿಸಿ ಪತ್ರ ಬರೆಯಲು ನೆರವಾಗುವವರ ಮುಂದೆ, ಸಾಲೀ ಮಾಸ್ತರರ ಮುಂದೆಯಂತೂ ಸೈ, ದೌತಿ ಮತ್ತು ಕಲಂ ಸಿದ್ಧವಾಗಿ ಬಾಯಿ ತೆರೆದುಕೊಂಡು ಕೂತಿರುತ್ತಿದ್ದವು-ನೆರವು ನೀಡಲು. ಅರೆ, ದೌತಿ ಎಂದರೆ ಮಸಿಕುಡಿಕೆ, ಕಲಂ(ಗಲಗು) ಎಂದರೆ ಆ ಕಾಲದ ಇಂಕನ್ನು ಅದ್ದಿ ಬರೆಯುವ ಕಡ್ಡಿ ಎಂದರೆ ಈ ಕಾಲದ ಯುವಕರಿಗೆ ಖಂಡಿತ ಅವುಗಳ ಕಲ್ಪನೆ ಬಾರದು. ರೈಲನ್ನು ಉಗಿಬಂಡಿ ಎಂದು ಕನ್ನಡಕ್ಕೆ ಅನುವಾದಿಸಿದರೆ ಹೇಗೆ ಅನರ್ಥವಾಗುತ್ತದೊ ಇದೂ ಹಾಗೆಯೇ. ಪ್ರಾಚ್ಯ ವಸ್ತು ಸಂಗ್ರಹಾಗಾರಕ್ಕೆ ಸೇರಿದ ಸರಕುಗಳೇ ಸೈ!

ಅರವತ್ತೈದು ವರ್ಷಗಳ ಹಿಂದಿನ (1957), ನನ್ನ ಅಪ್ಪನ ಕಾಲದ 'ನಾಗಮಣಿ' ಎಂಬ ಹಿಂದಿ ಸಿನಿಮಾದ ಭಾವಗೀತೆಯೊಂದು ಭಾಷೆಯ ಹಂಗಿಲ್ಲದೆ, ಎಲ್ಲ ಕಾಲಕ್ಕೂ ಸಲ್ಲುವ ಗುಣ ಹೊಂದಿದ್ದು ಇತಿಹಾಸ. ಆ ಕಾಲದಲ್ಲಿ 'ಕವಿ ಪ್ರದೀಪ' ಎಂಬ ಕಾವ್ಯನಾಮದಿಂದ ಖ್ಯಾತಿವೆತ್ತ ರಾಮಚಂದ್ರ ನಾರಾಯಣ್‌ಜೀ ದ್ವಿವೇದಿ ಅವರು ಬರೆದು, ಅವರೇ ಹಾಡಿದ 'ಪಿಂಜರೇಕೇ ಪಂಛೀರೇ' ಹಾಡು. ಅದಕ್ಕೆ ಸಂಗೀತ ನಿರ್ದೇಶನ ಮಾಡಿದ್ದು ಅವಿನಾಶ್ ವ್ಯಾಸ. ಆ ಸರಳ ರಚನೆಯ ಹಾಡಿಗೆ ಭಜನೆ ಧಾಟಿಯ ಸಂಗೀತ ಸಂಯೋಜನೆ ಮಾಡಿದ್ದಕ್ಕೇನೋ, ದೇಹ-ಆತ್ಮಗಳ ಪರಿಕಲ್ಪನೆಯೊಂದಿಗೆ, ಭಾರತೀಯ ಹೆಣ್ಣು ಮಗಳು ಮನೆಯಲ್ಲಿ ಬಂಧಿಯಾಗಿ ಅನುಭವಿಸುವ ಕೌಟುಂಬಿಕ ಶೋಷಣೆಯವರೆಗೆ ತಮಗೆ ತಾವೇ ಅನ್ವಯಿಸಿಕೊಂಡಂತೆ-ವಿಪರೀತ ಮನಮಿಡಿದ ಸರಳ ಸುಂದರ ಭಾವಗೀತೆಯಾಗಿ ಗಮನಸೆಳೆಯಿತು. ಹಾಗೆ